ಎಲ್ಲರಿಗೂ ಒಂದೇನಮನಾಗಿದೆ ಎನ್ನುವುದು ನನ್ನ ಅಭಿಪ್ರಾಯ.

Some allegation was made that this amount was allotted because the Deputy Minister for Public Works came from this district. The P.W.D. has nothing to do with this allotment. It is the L.S.G. Department which has done it with full responsibility. It has done this according to the needs of every district.

Sri B. V. DESAI.—Is it a fact that due to lack of technical personnel most of the works are held up ?

Sri T. SUBRAMANYA.—The reason stated by my friend is true to some extent in Hyderabad area.

Starting of a School of Art in the State.

*Q.—415. Sri A. J. DODDAMETI (Ron).—

Will the Government be pleased to state :—

(*a*) what are the facilities in the State for teaching art, drawing and painting ;

(*b*) whether the teaching of these subjects is compulsory in Secondary Schools ;

(*c*) whether they are aware that students of this State go to other States to study drawing and painting for want of facilities in this State ;

(*d*) the number of students of this State that appeared for the abovementioned examinations conducted by other States in 1957-58 ;

(*e*) whether Government is seriously considering establishing a School of Art in this State on the model of Sir J. J. School of Art, Bombay ?

*A.—*Sri ANNA RAO GANAMUKHI (Minister for Education).—

(*a*) There are at present seven Institutions providing facilities for teaching Art, Drawing and Painting in addition to High Schools.

(*b*) Drawing is compulsory subject in Bombay-Karnatak, Hyderabad Karnatak, Madras-Karnatak area and Coorg District, while in ex-Mysore it is an optional subject.

(*c*) Yes, for higher studies.

(*d*) 93 appeared for the Examinations conducted by Bombay State. Definite information is not available regarding other States.

(*e*) No.

ಶ್ರೀ ಎ. ಜೆ. ದೊಡ್ಡಮೇಟಿ.—ಮುಂಬೈ, ರಾಜ್ಯಕ್ಕೆ 93 ವಿದ್ಯಾರ್ಥಿಗಳು ಪರೀಕ್ಷೆಗೆ ಹೋಗಿದ್ದರು, ಉಳಿದ ರಾಜ್ಯಗಳಿಗೆ ಎಷ್ಟು ಜನ ಹೋಗಿದ್ದರೆಂಬುದು ಗೊತ್ತಿಲ್ಲವೆಂದು ಹೇಳಲಾಗಿದೆ. ಗೊತ್ತು ಮಾಡಿ ಕೊಳ್ಳುವುದಕ್ಕೆ ಏಕೆ ಸಾಧ್ಯವಾಗಿಲ್ಲ ?

ಶ್ರೀ ಅಣ್ಣಾರಾವ್ ಗಣಮುಖಿ.—ವ್ಯಕ್ತಿಗಳು ಬೇರೆ ಬೇರೆಯಾಗಿ ಹೋಗುವುದರಿಂದ ಈ ಮಾಹಿತಿ ದೊರೆಯಲಿಕ್ಕೆ ಸಾಧ್ಯವಾಗಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—130 ವಿದ್ಯಾರ್ಥಿಗಳು ಕಲೆಯ ವಿದ್ಯಾಭ್ಯಾಸಕ್ಕಾಗಿ ರಾಜ್ಯದಿಂದ ಹೊರಗೆ ಹೋಗುತ್ತಾರೆ. ಆ ವಿದ್ಯಾರ್ಥಿಗಳು ಇದೇ ರಾಜ್ಯದಲ್ಲಿ ತಮ್ಮ ವಿದ್ಯಾಭ್ಯಾಸಮಾಡಲಿಕ್ಕೆ ಶಾಲೆಗಳನ್ನು ತೆರೆಯಲು ಇರುವ ತೊಂದರೆ ಏನು ?

ಶ್ರೀ ಅಣ್ಣಾರಾವ್ ಗಣಮುಖಿ.—ತೊಂದರೆ ಏನೂ ಇಲ್ಲ. ಕೆಲವು ಸಂಸ್ಥೆಗಳು ಈ ದಿಸೆಯಲ್ಲಿ ಕೆಲಸ ಮಾಡಲಿಕ್ಕೆ ಹತ್ತಿವೆ. ಏಳು ಸಂಸ್ಥೆಗಳು ಕೆಲಸ ಮಾಡುತ್ತಿವೆ.

1 Chamarajendra Technical Institute Chitrasala, Mysore.
2 School of Art, Dharwar.
3 Kalamandir, Hubli.
4 Vijaya Art Institute, Gadag.
5 Chitramandir, Belgaum.
6 Institute of Fine Arts, Belgaum.
7 Royanna Institute of Art, Belgaum.

ಇವುಗಳಲ್ಲಿ ಕುಶಲಕಲೆಗಳನ್ನು ಕಲಿಸುತ್ತಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಜೆ. ಜೆ. ಸ್ಕೂಲ್ ಆಫ್ ಆರ್ಟ್, ಮುಂಬಯಿ, ಇದರ ಮಾದರಿಯಮೇಲೆ ಶಾಲೆಯನ್ನು ತೆರೆಯಲಿಕ್ಕೆ ಆಗುವುದಿಲ್ಲವೆಂದು ಹೇಳಲು ಕಾರಣವೇನು ?

ಶ್ರೀ ಅಣ್ಣಾರಾವ್ ಗಣಮುಖಿ.—ಮೈಸೂರಿನಲ್ಲಿರುವ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದು ಪರೀಕ್ಷೆಗೆ ಅಲ್ಲಿಗೆ ಹೋಗುತ್ತಾರೆ. ಕೆಲವು ಪರೀಕ್ಷೆಗಳಿಗೆ ಎಂದರೆ ಡ್ರಾಯಿಂಗ್ ಮಾಸ್ಟರ್ ಪರೀಕ್ಷೆ, ಆರ್ಟ್ ಮಾಸ್ಟರ್ ಪರೀಕ್ಷೆ, ಇಂಥವುಗಳಿಗೆ ಅಷ್ಟು ಸೌಲಭ್ಯಗಳಿಲ್ಲ. ಇದಕ್ಕಾಗಿ ನಾವು ಒಂದು ಅಡ್ವೈಸರಿ ಬೋರ್ಡ್ ಫಾರ್ ಆರ್ಟ್ ಅಂಡ್ ಕ್ರಾಫ್ಟ್ ಎಂದು ಮಾಡಿದ್ದೇವೆ. ಇವರ ಸಲಹೆ ಬಂದನಂತರ ಸೌಲಭ್ಯವನ್ನು ಕಲ್ಪಿಸುವ ವಿಚಾರವನ್ನು ಯೋಚನೆಮಾಡುತ್ತೇವೆ.

Sri C. S. HULKOTI.—Have these institutions been recognised by Government ?

Sri ANNA RAO GANAMUKHI.—Yes.

Sri C. S. HULKOTI.—May I know whether the grants have been paid to these institutions ?

Sri ANNA RAO GANAMUKHI.—That will be answered separately if a separate question is put.

Sri J. B. MALLARADHYA.—Supplementary to (*a*). What is this "Art" that you are teaching ?

Sri ANNA RAO GANAMUKHI.—They are preparing students for D.T.C. course, Elementary Drawing, Painting and Intermediate Drawing and Painting.

ಶ್ರೀ ಜೆ. ಬಿ. ಮಲ್ಲಾರಾಧ್ಯ.—'For providing facilities for teaching art, drawing and painting' ಎಂದು ಹೇಳಿದ್ದೀರಿ. ಆರ್ಟ್ ಎಂದರೆ ಅರ್ಥವೇನು ?

ಶ್ರೀ ಅಣ್ಣಾರಾವ್ ಗಣಮುಖಿ.—ಆರ್ಟ್, ಡ್ರಾಯಿಂಗ್ ಮತ್ತು ಪೇಂಟಿಂಗ್ ಇವು ಮೂರೂ ಕೂಡಿ ಹೇಳುತ್ತೇವೆ.

Sri S. D. KOTHAVALE.—Does Government know that the J.J. School of Art, Bombay, is imparting education in various Arts such as Drawing, Painting, Architecture, Sculpture, etc.? Does Government not think that it is essential to start a similar school here ?

Sri ANNA RAO GANAMUKHI.—That will be examined after the Advisory Committee meets and prepares the syllabus.

ಶ್ರೀಮತಿ ಬಸವರಾಜೇಶ್ವರಿ.—ಖಾಸಗಿ ಸಂಸ್ಥೆಗಳಿಗೆ ಸರ್ಕಾರ ಗ್ರಾಂಟ್ ಕೊಡಬೇಕೆಂದು ಮನಸ್ಸು ಮಾಡಿದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಅಪ್ಲಿಕೇಷ್ ಹಾಕಿದರೆ ಆದರಬೇರೆ ವಿಚಾರಮಾಡುತ್ತೇವೆ.

Smt. VIJAYA RAGHAVENDRA RAO.—Is it not a fact that drawing, painting are compulsory subjects in the Vocational Girls Institute, Gulbarga ?

Sri ANNA RAO GANAMUKHI.—I do not think they are compulsory.

ಶ್ರೀ ಎಂ. ಎಂ. ಪಾಟೀಲ್.—ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೇರೆ ರಾಜ್ಯಗಳಿಗೆ ಹೋಗುತ್ತಿದ್ದಾರೆ ಎಂದು ಹೇಳಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿಯೂ ಕೂಡ ಈ ವಿದ್ಯಾಭ್ಯಾಸದ ಅನುಕೂಲತೆಯನ್ನು ಮಾಡಿಕೊಡಲಕ್ಕೆ ಸರ್ಕಾರದವರು ಏನು ಯೋಜನೆಯನ್ನಿಟ್ಟು ಕೊಂಡಿದ್ದಾರೆ ?

ಶ್ರೀ ಅಣ್ಣಾರಾವ್ ಗಣಮುಖಿ.—ಒಂದು ಅಡ್ವೈಸರಿ ಬೋರ್ಡು ಮಾಡಿದ್ದೇವೆ. ಅವರ ಸಲಹೆಗಳ ಪ್ರಕಾರ ಈರೀತಿ ಮಾಡುವುದು ಅವಶ್ಯಕಂದರೆ ತೆಗೆದು ಕೊಳ್ಳುತ್ತೇವೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ಏಳು ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಕೊಡತಕ್ಕ ಉಪಾಧ್ಯಾಯರುಗಳನ್ನು ಸರ್ಕಾರದವರು ನೇಮಿಸಿರುತ್ತಾರೆಯೇ ಅಥವಾ ಖಾನಗಿಯವರೇ ನೇಮಿಸಿರುತ್ತಾರೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಅವೆಲ್ಲವೂ ಖಾನಗಿ ಸಂಸ್ಥೆಗಳಾಗಿವೆ.

Rubber Plantations in the State.

*Q.—506. Sri S. SUBBAYA NAIK (Puttur).—

Will the Government be pleased to state :—

(*a*) the total acreage of land under Rubber Plantation in the new Mysore State ;

(*b*) where they are situated and under whose management ;

(*c*) the income derived from and the expenditure incurred on rubber plantation in 1957-58 and 1958-59 ;

(*d*) the number of labourers employed in each such plantation ?

A.—Sri K. F. PATIL (Minister for Agriculture and Food).—

(*a*) The acreage for 1957—4030 acres.

Do for 1958—3853 acres.

(*b*) They are situated in Chickmagalur and Coorg Districts. Information under whose management they are is not readily available.

(*c*) Information is not available.

(*d*)—

	Garden Labourers (Permanent)	Outside Labourers (Permanent)	Outside Labourers (Temporary)	Total
1957 :	688	240	596	1524
1958 :	742	245	448	1435

(Total for all the estates)

ಶ್ರೀ ಎಸ್. ಸುಬ್ಬಯ್ಯನಾಯಕ್.—1957ರಲ್ಲಿ 4030 ಎಕರೆಗಳು, 1958ರಲ್ಲಿ 3853 ಎಕರೆಗಳು ಎಂದು ಕೊಟ್ಟಿದೆ. ಇವೆರಡನ್ನೂ ಕೂಡಿ ಲೆಕ್ಕಪೋ ಹೇಗೆ ಎಂಬುದನ್ನು ವಿವರಿಸುತ್ತೀರಾ ?

ಶ್ರೀ ಕೆ. ಎಫ್. ಪಾಟೀಲ್.—1957 ಮತ್ತು 1958ಕ್ಕೆ ಪ್ರಶ್ನೆ ಇದ್ದುದರಿಂದ ಎರಡು ವರ್ಷಗಳಿಗೂ ಪ್ರತ್ಯೇಕವಾಗಿ ಕೊಟ್ಟಿದೆ.